
ಎಂದು ಅತ್ತಿಗೆಗೆ ಹೇಳಿದರು. ಬಹುಶಃ ಆಗಲೇ ನನಗೆ ಅಮ್ಮನ ಮೇಲೆ ಬಹಳ ಜಿಗುಪ್ಸೆ ಬಂದು ಬಿಟ್ಟಿತು. ಎಲ್ಲೆ ಹೋದರೂ ತನ್ನನ್ನ ಮಾತ್ರ ಎಕ್ಸ್ ಪೋಸ್ ಮಾಡಿಕೊಳ್ಳುವಂತಹ ಕ್ಯಾರೆಕ್ಟರ್ ಅವಳದು.

ಅಜ್ಜಿ ಕೋಣೆಯಲ್ಲಿ ನನಗೆ, ಅತ್ತಿಗೆಗೆ ಇಬ್ಬರಿಗೂ ಹೇಳಿದ್ದರು, 'ಬದುಕು ತುಂಬಾನೇ ಪಾಠ ಕಲಿಸುತ್ತೆ ಕಣ್ರೆ... ನಾವು ಕಲೀತಾನೇ ಹೋಗಬೇಕು. ಇಲ್ಲಿಗೆ ಯಾಕೆ ಬಂದೆ ಹೇಳು... ನಿನಗಾಗಿ' ಅತ್ತಿಗೆಗೆ ಹೇಳಿದರು. 'ಆದರೆ ಇಲ್ಲಿ ಬಂದ ನಂತರ ನನಗೆ ನಿನಗಿಂತ ಚಿಕ್ಕ ಹುಡುಗಿ, ಮುಗ್ಧ ಹುಡುಗಿ ಸಿಕ್ಕಿದಳು' ನನ್ನ ಕಡೆ ಕೈ ತೋರಿಸಿದರು. 'ನಿಮ್ಮಮ್ಮ ಹೇಳೋದು, ಕೇಳೋದು ಎಲ್ಲ ಇರೋದೇನೇ. ನನ್ನ ಗಂಡ ಬದುಕಿದ್ದರೆ ನಾನು ಅವನ ಜೊತೆ ಬಾಳ್ವೆ ಮಾಡಿದ್ದರೆ ನನ್ನ ಅತ್ತೆ ಹೀಗೇ ಇರುತ್ತಿದ್ದಳಲ್ಲವೇ... ಬಿಟ್ಟು ಹೋಗೋದು ದೊಡ್ಡ ಕೆಲಸ ಅಲ್ಲವೇ ಅಲ್ಲ... ಹಿಡಿದು ಬಾಳೋದು ದೊಡ್ಡದು ಅಲ್ವೇ?' ನಕ್ಕಿದ್ದರು.



ಆದರೆ ಅವರ ಕಣ್ಣ ತುಂಬಾ ನೀರಿತ್ತು. ನನಗನ್ನಿಸಿತ್ತು, ಅಜ್ಜಿನ ಯಾವುದಾದರೂ ನೆಮ್ಮದಿಯಾದ ಸ್ಥಳಕ್ಕೆ ಬಿಡಬೇಕು ಅಂತ. 'ಇಲ್ಲ ಅಜ್ಜಿ... ನೀವು ಅತ್ತಿಗೆ ಹೇಳಿದಂತೆ ನಿಮ್ಮ ಅಣ್ಣಂದಿರ ಮನೆಗೆ ಹೊರಟು ಹೋಗಿ' ಅಂದೆ. ನನಗೂ ಅಳು.

'ಹುಚ್ಚಿ... ಇದೇ ಕಣೆ ಈ ಸರದ್ದು, ರುದ್ರಾಕ್ಷಿದು ಬಂಧನ. ನೀನು, ನಿನ್ನ ಅತ್ತಿಗೆ ಶೇಷಮ್ಮನ ಜೊತೆ ಅಂಟಿಕೊಂಡಿದ್ದೀರ. ನಿಮ್ಮಮ್ಮ ಬಿಡು... ಯಾವ ಜನ್ಮದ ಋಣಾನೋ... ಅದನ್ನ ತೀರಿಸಲೇ ಬೇಕು. ಈಗ ಓಡಿ ಹೋಗಿಬಿಟ್ಟರೆ ಸಾಲ ತೀರಿಸಲು ಮತ್ತೆ ಹುಟ್ಟಲೇಬೇಕು ಅಲ್ಲವೇ?' ಅಂದಿದ್ದಳು. ನಂತರ ಅವಳು ಎಂದೂ ತುಟಿ ಎರಡು ಮಾಡಲಿಲ್ಲ. ಅಮ್ಮ ಮಾತ್ರ ಪ್ರತೀಕಾರ ತೀರಿಸಿಕೊಳ್ಳುವಂತೆ ನಡೆಸಿಕೊಂಡು ಬಿಟ್ಟಳು. ಮೆಣಸಿನ ಪುಡಿ ಮಾಡುವುದರಿಂದ ಹಿಡಿದು ಚಕ್ಕುಲಿ, ಕೋಡುಬಳೆ, ಉಂಡೆಗಳು... ಒಂದೇ ಎರಡೇ ಮಾಡಿಸೋದು ಊರಿಗೆಲ್ಲ ಹಂಚೋದು... ತಾನು ತುಂಬಾ ಒಳ್ಳೆಯವಳು ಎಂದು ಪೋಸ್ ಕೊಡೋದು... ಈ ಬಿರುದು ಬಾವಲಿಗಳನ್ನು ಅವಳು ಉದ್ದಕ್ಕೂ ಕಾಪಾಡಿಕೊಂಡೇ ಬಂದಳು. ಅಜ್ಜಿ ಮಾತ್ರ 'ಈ ವ್ಯಾಪಾರ ನನ್ನದಲ್ಲ ಕಣೆ ... ಆ ಶಿವನದು' ಎಂದು ಸುಮ್ಮನಾಗಿಬಿಡುತ್ತಿದ್ದಳು.

ಅಣ್ಣಂಗೆ ಕೆನಡಾಗೆ ನಾಲ್ಕು ವರ್ಷ ಹೋಗುವ ಸಂದರ್ಭ ಬಂತು. ಆಗಲೇ ಎಲ್ಲ ಏರು ಪೇರಾಗಿದ್ದು. ಅತ್ತಿಗೆ ಕೂಡ ಹೊರಟಿದ್ದಳು. ಶೇಷಜ್ಜಿನ ಕರಕೊಂಡು ಹೋಗೋಣ ಅಂತ ಅವಳು. ಅಲ್ಲಿಯ ಹವಾಮಾನ ಅವರಿಗೆ ಸರಿಯಾಗಲ್ಲ ಅಂತ ಅವನು. ನಾವು ಕರಕೊಂಡು ಹೋಗೋಣ ಅಂತ ನಾನು. ದೆಹಲಿಯ ವೈಪರೀತ್ಯ ಅವರಿಗಾಗಲ್ಲ ಅಂತ ಇವರು. ಅವರ ಮಾತು ನಿಜವೇ ಇರಬಹುದು... ಆದರೆ ಅಮ್ಮನ ಕೈಯಲ್ಲಿ ಅಜ್ಜಿನ ಬಿಡೋದು ಅಂದ್ರೆ!! ಅಪ್ಪ